# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ.706/2017**

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-4**

ದಿಃ **19.06.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರಮೇಶ |
| ಗಂಡ/ತಂದೆಯ ಹೆಸರು | ಜವರೇಗೌಡ |
| ವಯಸ್ಸು | ಸುಮಾರು **54** ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಹಿಂಡಗೂಡ್ಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-**1** ನನ್ನ ತಂಗಿ. ಚಾಸಾ-**2** ನನ್ನ ಬಾಮೈದ. ಚಾಸಾ-**3** ನನ್ನ ಭಾವ. ಚಾಸಾ-**5** ಗೊತ್ತಿಲ್ಲ. ಚಾಸಾ-**6** ನನ್ನ ಭಾವನ ತಮ್ಮ. ಆರೋಪಿತರು ಹಾಗೂ ಚಾಸಾ-**1** ರವರ ನಡುವೆಯಾದ ಗಲಾಟೆಯ ವಿಚಾರ ನನಗೆ ಗೊತ್ತಿಲ್ಲ. ಆರೋಪಿತರು ಅಕ್ರಮ ತಡೆಯನ್ನುಂಟು ಮಾಡಿಲ್ಲ. ಹಲ್ಲೆ ಮಾಡಿಲ್ಲ. ಚಾಸಾ-**1** ರವರ ಮಾನಕ್ಕೆ ಚ್ಯುತಿ ಬರುವ ಹಾಗೆ ವರ್ತಿಸಿಲ್ಲ. ಅವಾಚ್ಯವಾಗಿ ನಿಂದಿಸಿರುವುದಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದಿರುವ ಎರಡು ದೊಣ್ಣೆಗಳನ್ನು ಹಾಗೂ ರವಿಕೆಯನ್ನು ಇಂದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

(ಈ ಹಂತದಲ್ಲಿ ಸಾಕ್ಷಿ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)

ಪಾಟೀಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಿಮ್ಮ ಊರಿನ ಜವರೇಗೌಡರ ಹೆಸರಿನಲ್ಲಿ **15** ಎಕರೆ ಜಮೀನು

ಇದೆ ಎಂದರೆ ಸರಿ. ಜಮೀನನ್ನು ಜವರೇಗೌಡರೇ ವ್ಯವಸಾಯ ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ಜಮೀನಿನ ಪೈಕಿ ಚಾಸಾ-2 ರವರು 1 ಎಕರೆ ಜಮೀನನ್ನು ಹಾಗೂ 2ನೇ ಆರೋಪಿಗೆ 2 ಎಕರೆ ಜಮೀನನ್ನು ವ್ಯವಸಾಯ ಮಾಡುವಂತೆ ಬಿಟ್ಟಿರುತ್ತಾರೆಂದರೆ ಸರಿ. ಆ ಜಮೀನಿನ ವಿಚಾರದಲ್ಲಿ ಚಾಸಾ-2 ಹಾಗೂ 2ನೇ ಆರೋಪಿಗೆ ಆಗಾಗ ಗಲಾಟೆ ನಡೆಯುತ್ತಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಿಃ 11.08.2017 ರಂದು ಬೆಳಿಗ್ಗೆ 11-00 ಗಂಟೆಗೆ ಚಾಸಾ-2 ಜಮೀನಿನಲ್ಲಿ ಬೆಳೆದಿದ್ದ ಜೋಳದ ಕಡ್ಡಿಗಳನ್ನು ಕೊಯ್ಯುತ್ತಿದ್ದಾಗ ನೀವು ಹಾಗೂ ಚಾಸಾ-3 ರವರು ಅಲ್ಲಿಗೆ ಹೋಗಿದ್ದೀರಿ ಎಂದರೆ ಸರಿಯಲ್ಲ. ನಂತರ ನೀವು ಹಾಗೂ ಚಾಸಾ-3, ಚಾಸಾ-2 ಹಾಗೂ 2ನೇ ಆರೋಪಿಯನ್ನು ಕರೆಯಿಸಿ, ಅವರಿಬ್ಬರ ಸಮಕ್ಷಮ ಇಬ್ಬರಿಗೂ ಸೇರಿದ ಜಮೀನನ್ನು ದಾಪುಗಾಲಿನಿಂದ ಅಳತೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ದಾಪುಗಾಲಿನಂತೆ ಅಳತೆ ಮಾಡುತ್ತಿದ್ದಾಗ, ಚಾಸಾ-1 ರವರು ದಾಪುಗಾಲಿನಿಂದ ಯಾಕೆ ಅಳತೆ ಮಾಡುತ್ತೀರಿ, ಪೈಪ್ ನಿಂದ ಅಳತೆ ಮಾಡಿ ಎಂದು ಹೇಳಿದ್ದಕ್ಕೆ, 2ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯವಾಗಿ ಬೈದರು ಎಂದರೆ ಸರಿಯಲ್ಲ. ಅದಕ್ಕೆ ಚಾಸಾ-2, ಚಾಸಾ-1 ರವರಿಗೆ ಯಾಕೆ ಬಯ್ಯುತ್ತೀಯಾ ಎಂದು ಕೇಳಲು 2ನೇ ಆರೋಪಿಯ ಬಳಿ ಹೋದಾಗ, ಅಲ್ಲೇ ಇದ್ದ 1ನೇ ಆರೋಪಿ ತನ್ನ ಕೈಯಲ್ಲಿದ್ದ ಖಾರದ ಪುಡಿಯನ್ನು ಚಾಸಾ-2 ರವರ ಕಣ್ಣಿಗೆ ಎರಚಿ, ತಡೆದರು ಎಂದರೆ ಸರಿಯಲ್ಲ. 1ನೇ ಆರೋಪಿ ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ಚಾಸಾ-2 ರವರ ಎಡಮೊಣಕೈಗೆ ಹಾಗೂ ಎಡಎದೆಗೆ ಹೊಡೆದು ನೋವುಂಟುಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ತೆಂಗಿನ ಮರದ ಗೊದಮಟ್ಟೆಯಿಂದ ಚಾಸಾ-2 ರವರ ಬಲ ಪಕ್ಕೆಗೆ ಹೊಡೆದಳು ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-2 ರವರ ಬಲತೊಳಿಗೆ ಹಲ್ಲಿನಿಂದ ಕಚ್ಚಿದನು ಎಂದರೆ ಸರಿಯಲ್ಲ. ಆಗ ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ 1ನೇ ಆರೋಪಿ ಖಾರದ ಪುಡಿಯನ್ನು ಕಣ್ಣಿಗೆ ಎರಚಿ, ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನು ಎಳೆದಾಗ, ಸರ ಕಿತ್ತುಹೋಯಿತು ಎಂದರೆ ಸರಿಯಲ್ಲ.

1ನೇ ಆರೋಪಿ ಮತ್ತೊಂದು ದೊಣ್ಣೆಯಿಂದ ಚಾಸಾ-1 ರವರ ಎಡಗೈ ತೊಳಿಗೆ ಹಾಗೂ ಎಡಕಾಲಿಗೆ ಹೊಡೆದರು ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-1 ರವರ ಮುಂದೆಲೆ ಹಿಡಿದು ಎಳೆದಾಡಿ, ರವಿಕೆಯನ್ನು ಹರೆದು ಹಾಕಿ, ಅಪಮಾನಪಡಿಸಿದ ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-2 ರವರನ್ನು ಗದ್ದೆಯಲ್ಲಿ ಹಾಕಿಕೊಂಡು ತುಳಿಯುತ್ತಿದ್ದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲೇ ಇದ್ದ ನೀವು ಹಾಗೂ ಚಾಸಾ-3 ರವರು ಹೋಗಿ ಜಗಳ ಬಿಡಿಸಿ ಸಮಾಧಾನಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಆಗ 1ನೇ ಆರೋಪಿ ಚಾಸಾ-2 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರು ಆಸ್ಪತ್ರೆಗೆ ಹೋಗುತ್ತೇವೆಂದು ಹೋದರು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿಃ 12.08.2017 ರಂದು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

ಆರೋಪಿತರು ನಿಮ್ಮ ಸಂಬಂಧಿಕರು ಎಂದರೆ ಸರಿ. ಅವರಿಗೆ ಸಹಾಯ ಮಾಡುವ ಉದ್ದೇಶದಿಂದ, ನಿಪಿ-5 ರಂತೆ ಹೇಳಿಕೆ ನೀಡಿದ್ದರೂ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ ವಿ.ಕೆ. ವಕೀಲರಿಂದಃ

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.